**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**CC No.1066/2024**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಮುತ್ತಪ್ಪ ಕಲ್ಲನಗೌಡ್ರ | ಪಿಡಬ್ಲ್ಯೂ | 02 |
| ಗಂಡನ ಹೆಸರು | : | ಭೀಮನಗೌಡ | ಸಿ ಡಬ್ಲ್ಯೂ | 04 |
| ವಯಸ್ಸು | : | 65 ವರ್ಷ | | |
| ಉದ್ಯೋಗ | : | ವ್ಯವಸಾಯ | | |
| ವಾಸ ಸ್ಥಳ | : | ಬೈಚವಳ್ಳಿ | | |

**ದಿನಾಂಕ: 19.08.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ಆರೋಪಿತರ ಪರಿಚಯ ಇದೆ. 1 ನೇ ಆರೋಪಿ ನನ್ನ ಮಗಳ ಗಂಡ. 2 ನೇ ಆರೋಪಿ ನನ್ನ ಅಳಿಯನ ಅಣ್ಣ. ಚಾಸಾ-1 ನನ್ನ ಮಗಳು. ಚಾಸಾ-7, 2 ನೇ ಆರೋಪಿಯ ಹೆಂಡತಿ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ, ಚಾಸಾ-1 ಮತ್ತು ಆರೋಪಿತರ ಮಧ್ಯ ಯಾವುದೇ ಘಟನೆ ನಡೆದಿರುವುದಿಲ್ಲ. ನಾನು ಪೋಲಿಸರಿಗೆ ವಿಚಾರಣೆ ಕಾಲಕ್ಕೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ**

ದಿಃ 27.07.2024 ರಂದು ನಾನು, ಚಾಸಾ-1 ರವರು ಸೇರಿಕೊಂಡು ಸೊರಬ ತಾಲ್ಲೂಕು ಡ್ವಾನಳ್ಳಿ ಗ್ರಾಮದಲ್ಲಿ ವೀರಭದ್ರೇಶ್ವರ ಜಾತ್ರೆ ಪ್ರಯುಕ್ತ ನಮ್ಮ ಸಂಬಂದಿಕವರ ಮನೆಗೆ ಹೋಗಿ ಜಾತ್ರೆ ಮುಗಿಸಿಕೊಂಡು ವಾಪಾಸ್ಸು ಬೈಚವಳ್ಳಿಗೆ ಹೋಗಲು ಅಂತಾ ಹಾನಗಲ್ ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಹತ್ತಿರ ಇರುವ ಚಪ್ಪಲಿ ಅಂಗಡಿ ಹತ್ತಿರ ಹೋಗಿ ನಾನು ಚಪ್ಪಲಿ ಹೋಲಿಸಿಕೊಳ್ಳುತ್ತಿದ್ದಾಗ ಸಾಯಂಕಾಲ 6.30 ಗಂಟೆ ಸುಮಾರಿಗೆ ಆರೋಪಿತರು ನಮ್ಮನ್ನು ನೋಡಿ ಅಲ್ಲಿಗೆ ಬಂದರು ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ಕೋರ್ಟನಲ್ಲಿ ತನ್ನ ವಿರುದ್ದ ಪ್ರಕರಣ ದಾಖಲಿಸಿದ್ದಲ್ಲದೇ ಕೋರ್ಟನಿಂದ ನನ್ನನ್ನು ಅರೆಸ್ಟ ಮಾಡಲಿಕ್ಕೆ ನನ್ನ ವಿರುದ್ಧ ವಾರೆಂಟ ಕೊಡಿಸಿದ್ದೀಯಾ ಅಲ್ಲದೇ ನನ್ನ

ಅಣ್ಣನ ಹೆಂಡತಿಗೂ ಕೂಡಾ ಚಿತಾವಣೆ ಮಾಡಿ ಅವಳು ಸಹ ನನ್ನ ಅಣ್ಣನ ವಿರುದ್ಧ ಪ್ರಕರಣವನ್ನು ದಾಖಲಿಸುವಂತೆ ಮಾಡಿದ್ದೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ.

ನಂತರ 1 ನೇ ಆರೋಪಿ ಇವತ್ತು ನಿನಗೆ ಚಾಸಾ-1 ರವರಿಗೆ ಜನರ ಸಮ್ಮುಖದಲ್ಲಿಯೇ ಚಪ್ಪಲಿಯಿಂದ ಹೊಡೆದು ನಿಮ್ಮ ಮರ್ಯಾದೆ ತೆಗೆಯುತ್ತೇನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿತರು ಚಾಸಾ-1 ರವರ ಜುಟ್ಟು ಹಿಡಿದು ಎಳೆದಾಡಿದರು ಎಂದರೆ ಸರಿಯಲ್ಲ. 1 ನೇ ಆರೋಪಿ ತನ್ನ ಕಾಲಿನಲ್ಲಿದ್ದ ಚಪ್ಪಲಿಯಿಂದ ಚಾಸಾ-1 ರವರ ದುಬ್ಬಕ್ಕೆ ಹೊಡೆದನು ಎಂದರೆ ಸರಿಯಲ್ಲ. 2 ನೇ ಆರೋಪಿ ಚಾಸಾ-1 ರವರಿಗೆ ಕೈಯಿಂದ ಮೈಕೈಗೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ಆಗ ಅವಾಚ್ಯ ಶಬ್ದಗಳಿಂದ ನನಗೂ ಹಾಗೂ ಚಾಸಾ-1 ರವರಿಗೆ ಬೈದು ಚಾಸಾ-1 ರವರ ಬಟ್ಟೆಯನ್ನು ಎಳೆದು ಮಂದಿಯಲ್ಲಿ ನಿನ್ನ ಮರ್ಯಾದೆಯನ್ನು ತೆಗೆಯುತ್ತೇನೆ ಎನ್ನುತ್ತಾ ಚಾಸಾ-1 ರವರ ಸೀರೆ ಹಿಡಿದು ಎಳೆದಾಡಿರುತ್ತಾನೆ ಎಂದರೆ ಸರಿಯಲ್ಲ. ಆಗ ನಾನು ಚಾಸಾ-1 ರವರಿಗೆ ಹೊಡೆಯುವುದನ್ನು ಬಿಡಿಸಲು ಬಂದಾಗ ನನಗೆ ಆರೋಪಿತರು ಕೈಯಿಂದ ಹೊಡಿಬಡಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಅಲ್ಲಿಯೇ ಇದ್ದ ನಮ್ಮ ಊರಿನ ಚಾಸಾ-5 ಮತ್ತು 6 ರವರು ಆರೋಪಿತರಿಗೆ ಬುದ್ಧಿ ಹೇಳಿ ಜಗಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದು ಇವತ್ತು ಉಳಿದುಕೊಂಡಿರಿ ಇನ್ನು ಮುಂದೆ ಸಿಕ್ಕರೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಚಾಸಾ-1 ರವರು ದಿಃ 28.02.2024 ರಂದು ನಿಪಿ-1 ರಂತೆ ದೂರು ಸಲ್ಲಿಸಿರುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಈ ಮೇಲೆ ಓದಿ ಹೇಳಿದಂತೆ ಘಟನೆ ವಿಚಾರವಾಗಿ ದಿಃ 28.02.2024 ರಂದು ತನಿಖೆ ಕಾಲಕ್ಕೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಲ್ಲಗಳೆದ ಹೇಳಿಕೆ ಭಾಗವನ್ನು ನಿಪಿ-6 ಎಂದು ಗುರುತಿಸಲಾಯಿತು. ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುತ್ತೇನೆ. ಆರೊಪಿತರೊಂದಿಗೆ ರಾಜೀ ಮಾಡಿಕೊಂಡಿರುವ ಕಾರಣ ಅವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**:ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ಆರೋಪಿ ಪರ ವಕೀಲರು ಪಾಟೀ ಸವಾಲು ಏನೂ ಇಲ್ಲ ಅಂತಾ ಹೇಳಿರುತ್ತಾರೆ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

(ಶ್ರೀ. ಮಹೇಶ ಎಸ್ ಪಾಟೀಲ)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ ಎಂ ಎಫ್ ಸಿ ಹಾನಗಲ್

ಎಲ್ಲಾ ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಈಗ ಸಾಕ್ಷಿಗೆ ನಿಪಿ–1 ದೂರನ್ನು ತೋರಿಸಿದ್ದು ಸದರಿ ದೂರಿನ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸದರಿ ಸಹಿಯನ್ನು ನಿಪಿ–1 ಎ ಎಂದು ಗುರುತಿಸಲಾಯಿತು.

ಆರೋಪಿ ವಿರುದ್ದ ಸಂಪೂರ್ಣ ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ಸದರಿ ಆರೋಪಿ ವಿರುದ್ಧ ಅಂತಿಮ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

ಆರೋಪಿಯ ಸ್ವಖುಷಿ ಹೇಳಿಕೆಯನ್ನು

ಅಂಕಿಸಂಖ್ಯೆಗೋಸ್ಕರ ಆರೋಪಿಯ ವಿರುದ್ದ ಯಾವುದೇ ಸೂಕ್ತ ಸಾಕ್ಷ್ಯಾಧಾರಗಳು ಇಲ್ಲದ್ದರೂ ಸಹಿತ ಕೇವಲ ಅಂಕಿಸಂಖ್ಯೆಗೋಸ್ಕರ ಹಾಗೂ ಬೇವಾರಸಿ ಮುದ್ದೆಮಾಲುಗಳನ್ನು ವಿಲೇವಾರಿ ಮಾಡುವ ದುರುದ್ದೇಶದಿಂದ ನಾನು ಆರೋಪಿ ವಿರುದ್ದ ಒಂದು ಸುಳ್ಳು ಆರೋಪಿ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಘಟನಾ ಸ್ಥಳದ ಚಕಬಂದಿ ಸಾಕ್ಷಿಯ ತನಿಖಾಧಿಕಾರಿ ಆಗಿದ್ದರಿಂದ ಅವರಿಗೆ ನೆನಪು ಮೆಲಕು ಪುನರ್ಮನನ ಮಾಡಲು ದಾಖಲಾತಿಗಳನ್ನು ನೋಡುವ ಅಧಿಕಾರ ಹೊಂದಿದ್ದು ದಾಖಲಾತಿ ನೋಡಿ ಉತ್ತರಿಸುತ್ತಾರೆ.

ಈ ಕೇಸಿಗೂ, ಕೇಸಿನ ಮುದ್ದೆಮಾಲಿಗೂ ಹಾಗೂ ಆರೋಪಿಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ.